

ಅದೇ ಜಾಗದಲ್ಲಿರುವ ಮಹಿಳೆ ತನ್ನ ಜವಾಬ್ದಾರಿ, ಚೌಕಟ್ಟನ್ನು ಮೀರಿ ಹೊರ ಹೋಗುವುದು ಸ್ವಾರ್ಥ ಎನಿಸಿಕೊಳ್ಳುತ್ತದೆ.

"ನಾವು ಹುಡುಗಿಯರಿಗೆ ಕುಗ್ಗುವುದನ್ನು ಕಲಿಸುತ್ತೇವೆ. ನೀವು ಆಕಾಂಕ್ಷೆ ಇಟ್ಟುಕೊಳ್ಳಬಹುದು, ಆದರೆ ತುಂಬಾ ಅಲ್ಲ. ನೀವು ಯಶಸ್ವಿಯಾಗಬಹುದು, ಆದರೆ ತುಂಬಾ ಅಲ್ಲ, ಇಲ್ಲವಾದರೆ ನೀವು ಪುರುಷರಿಗೆ ಬೆದರಿಕೆಯಾಗುತ್ತೀರಿ" ಎನ್ನುತ್ತಾರೆ ಬರಹಗಾರ್ತಿ ಚಿಮ್ಮಮಂಡಾ ಅಡಿಚಿ.

ಬೆಳೆದು ಬಂದ ವಾತಾವರಣ, ಎದುರಿಸುವ ಸವಾಲುಗಳು, ಸಮಾಜದ ಕಟ್ಟುಪಾಡುಗಳು ಮಹಿಳೆಯರಿಗೆ ಮತ್ತು ಪುರುಷರಿಗೆ ಬೇರೆಬೇರೆಯಾಗಿರುವಷ್ಟು ಕಾಲವೂ ಅವರಿಬ್ಬರ ಯಶಸ್ಸು ಮತ್ತು ಅದಕ್ಕಿರುವ ಸೂತ್ರಗಳು ಒಂದೇ ಆಗಿರುವುದಕ್ಕೆ ಸಾಧ್ಯವಿಲ್ಲ. ಒಬ್ಬ ಪುರುಷ ಅಧಿಕಾರಿ ತನ್ನ ಕಚೇರಿಯಲ್ಲಿ ಶಿಸ್ತು ಬಯಸಿದರೆ ಅದನ್ನು ಗುಣಾತ್ಮಕವಾಗಿ ನೋಡುವ ಸಮಾಜ, ಒಬ್ಬ ಮಹಿಳೆ ಅದನ್ನು ನಿರೀಕ್ಷಿಸಿದರೆ ಆಕೆಯನ್ನು ಋಣಾತ್ಮಕವಾಗಿ ನೋಡುತ್ತದೆ.

## ಹಿನ್ನೆಲೆಯಲ್ಲಷ್ಟೇ ಸ್ಥಾನ...

ಸ್ವ–ಉದ್ಯೋಗಿಗಳಲ್ಲೂ ಈ ವ್ಯತ್ಯಾಸಗಳು ಕಂಡುಬರುತ್ತವೆ. ಮಹಿಳೆಯರಿಗೆ ಮೊದಲಿನಿಂದಲೂ ಆರ್ಥಿಕ ಹಾಗೂ ಸಾಮಾಜಿಕ ಸ್ವಾತಂತ್ರ್ಯದ ಕೊರತೆಯಿರುವುದರಿಂದ ಮಹಿಳಾ ಪ್ರಧಾನ ಉದ್ಯೋಗದ ಬಂಡವಾಳ ಹೂಡಿಕೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಆದರೆ, ಅದರ ಮೂಲ ಕಾರಣವನ್ನು ಅರಿತುಕೊಳ್ಳದೇ ಮತ್ತು ನಂತರದಲ್ಲಿ ಅವಕಾಶಗಳನ್ನು ನೀಡದೇ ಮಹಿಳೆಗಿಂತ ಪುರುಷ ಸಮರ್ಥ ಎಂದೇ ನೋಡಲಾಗುತ್ತದೆ. ಹೆಚ್ಚಿನ ಕಡೆ ಕಚೇರಿಗಳಲ್ಲಿ ಮಹಿಳೆಯರಿಗೆ ಮುಟ್ಟು, ತಾಯ್ತನದಂತಹ ಪರಿಸ್ಥಿತಿಗಳಿಂದಾಗಿ ಅವರು ಕಡಿಮೆ ಪ್ರೊಡಕ್ಟಿವ್ ಎಂದು ನಿರ್ಧರಿಸಿ ಪುರುಷರಿಗಿಂತ ಕಡಿಮೆ ಸಂಬಳ ನೀಡುವ ಉದಾಹರಣೆಗಳೂ ಇವೆ.

ಮಹಿಳೆಯರನ್ನು ಹಿಂದಿನಿಂದಲೂ ಯಶಸ್ವೀ ಪುರುಷನಿಗೆ ಬೆಂಬಲವಾಗಿ ನಿಲ್ಲುವ, ನಿಲ್ಲಬೇಕಾದ ಪಾತ್ರವಷ್ಟೇ ಎಂದು ನಿರ್ಧರಿಸಿರುವುದರಿಂದ ಆಕೆಯ ಯಶಸ್ಸಿಗೆ ಸ್ತ್ರೀ ಆಯಾಮದಲ್ಲಿ ಯೋಚಿಸುವ ಅಗತ್ಯ ಖಂಡಿತಾ ಇದೆ. ಎಲ್ಲಕ್ಕಿಂತ ಹೆಚ್ಚಾಗಿ ಯಶಸ್ಸು ಎನ್ನುವುದನ್ನು ಗಂಡು–ಹೆಣ್ಣು ಇಬ್ಬರಿಗೂ ಸಮಾನವಾಗಿ ವ್ಯಾಖ್ಯಾನಿಸಲೂ ಸಾಧ್ಯವಾಗಿಲ್ಲ. ದಶಕಗಳಿಂದಲೂ ಗಂಡು ವಿದ್ಯಾವಂತನಾಗಿ ದುಡಿದು ಸೆಟಲ್ ಆಗುವುದನ್ನು ಸಮಾಜ ಯಶಸ್ಸು ಎಂದರೆ, ಹೆಣ್ಣಿನ ಯಶಸ್ಸನ್ನು ಆಕೆ ಕುಟುಂಬವನ್ನು ಹೇಗೆ ನಿಭಾಯಿಸುತ್ತಾಳೆ ಅಥವಾ ಗಂಡಿಗೆ ಹೇಗೆ ಬೆಂಬಲ ನೀಡುತ್ತಾಳೆ ಎನ್ನುವುದರ ಮೂಲಕ ಅಳೆಯಲಾಗುತ್ತದೆ. ಹಗಲಿರುಳೂ ಕೆಲಸ ಮಾಡುವ ಪುರುಷನಲ್ಲಿ ಪರಿಶ್ರಮ ಕಂಡರೆ, ಅಷ್ಟೇ ಕೆಲಸ ಮಾಡುವ ಹೆಣ್ಣನ್ನು ಸ್ವಕೇಂದ್ರಿತ ಅಥವಾ ಕುಟುಂಬವನ್ನು ನಿರ್ಲಕ್ಷಿಸಿದವಳು ಎಂದು ಟೀಕಿಸಲಾಗುತ್ತದೆ.

ಯಶಸ್ಸಿನ ವ್ಯಾಖ್ಯಾನ ಮಹಿಳೆಗಷ್ಟೇ ಅಲ್ಲ, ಪುರುಷನಿಗೂ ಒತ್ತಡವೇ. ಮನೆಯಲ್ಲಿ ಮಕ್ಕಳನ್ನು ನೋಡಿಕೊಳ್ಳುವ ಗಂಡ ಕೆಲಸವಿಲ್ಲದವನು ಎನಿಸಿಕೊಳ್ಳುತ್ತಾನೆ. ಆತ ತನ್ನ ಇಚ್ಛೆಗೆ ವಿರುದ್ಧವಾಗಿಯಾದರೂ ಸಮಾಜದ ನಿರೀಕ್ಷೆಗಳಿಗೆ, ವ್ಯಾಖ್ಯಾನಗಳಿಗೆ ಅನುಗುಣವಾಗಿ ಯಶಸ್ಸನ್ನು ನಿರ್ಧರಿಸಿಕೊಳ್ಳುತ್ತಾನೆ.

ಯಶಸ್ಸಿನ ಮಾನದಂಡಗಳು, ವ್ಯಾಖ್ಯಾನಗಳು ಎರಡೂ ಗಂಡು ಮತ್ತು ಹೆಣ್ಣಿನ ವೈಯಕ್ತಿಕ ಆಯ್ಕೆಯಾಗಬೇಕೇ ಹೊರತು ಸಮಾಜದ ಹೇರಿಕೆಯಾಗಬಾರದು. ಲಿಂಗಾಧಾರಿತ ತಾರತಮ್ಯ ಒಂದು ಮಗು ಹುಟ್ಟುವ ಮೊದಲಿನಿಂದಲೂ ಆರಂಭವಾದರೆ, ಅವನ/ಅವಳ ಇಡೀ ಬದುಕನ್ನು ನಿರ್ಧರಿಸುತ್ತಾ ಹೋಗುತ್ತದೆ. ಎರಡೂ ವಿಭಿನ್ನವಾದ ಬದುಕುಗಳಿಗೆ ಒಂದೇ ರೀತಿಯ ಸೂತ್ರವನ್ನು ಅಳವಡಿಸಿ ಅದನ್ನೇ ಹೇರುವುದು ಯಶಸ್ಸಿನ ಬದಲಾಗಿ ಒತ್ತಡವಾಗುತ್ತಾ ಹೋಗುತ್ತದೆ. ಬದಲಾಗಿ, ಹೆಣ್ಣು–ಗಂಡು ಇಬ್ಬರ ನಡುವಿನ ವ್ಯತ್ಯಾಸಗಳನ್ನು ತಿಳಿದು, ಅದಕ್ಕೆ ಅನುಗುಣವಾಗಿ ತಾವು ಸಾಗಬೇಕಾದ ದಾರಿಯನ್ನು ನಿರ್ಧರಿಸಬೇಕಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಸಮಾನ ಅವಕಾಶಗಳನ್ನು ಸೃಷ್ಟಿಸುವಲ್ಲಿ, ಅಸಮಾನತೆಯನ್ನು ಕಡಿಮೆಗೊಳಿಸುವಲ್ಲಿನ ಪ್ರಯತ್ನಗಳು ಹೆಚ್ಚಾಗಬೇಕಿದೆ, ಮತ್ತು ಯಶಸ್ಸಿನ ಸೂತ್ರಗಳನ್ನು ಅವಕಾಶಗಳಿಗೆ, ಸವಾಲುಗಳಿಗೆ ತಕ್ಕಂತೆ ಮರುರೂಪಿಸುವ ಅಗತ್ಯವಿದೆ.

ಪ್ರತಿಕ್ರಿಯಿಸಿ: **feedback@sudha.co.in**